**Andolana**

Date: 19-03-2021 Page No: 6

Edition: Mysore Language: Kannada

# ಎಸ್‌ಡಿಎಂನಲ್ಲಿ ಉದ್ಯಮ ಕುರಿತ ಕಾರ್ಯಕ್ರಮ

ಮೈಸೂರು: ಎಸ್‌ಡಿಎಂಐಎಂಡಿ–ಸಿಐಐ ಸಹಯೋಗದಲ್ಲಿ ಕಾನ್ವರ್ಜೆನ್ಸ್ –3ಐ ವಾರ್ಷಿಕ ಇಂಡಸ್ಟ್ರಿ ಅಕಾಡೆಮಿಯ ಇಂಟರ್‌ಫೇಸ್' ಕಾರ್ಯಕ್ರಮ ಈಚೆಗೆ ನಡೆಯಿತು.

ಬೆಂಗಳೂರಿನ ಫೀಡ್ಬ್ಯಾಕ್ ಇನ್ಸ್ಟಿಟ್ಯೂಟ್ಸ್ ಸಂಸ್ಥೆಯ ಸಿಇಒ ಎಸ್.ಚಂದ್ರಮೌಳಿ ಮಾತನಾಡಿ, ಜಡತ್ವದಿಂದ ಗುರಿ ಆಧಾರಿತ ಕಾರ್ಯವ್ಯವಸ್ಥೆ, ಆಜೀವ ಉದ್ಯೋಗದಿಂದ ಆಜೀವ ಉದ್ಯೋಗದಾತತೆ ಮತ್ತು ಆಯ್ಕೆ ಮಾಡಿದ ಕ್ಷೇತ್ರದಿಂದ ಆಸಕ್ತಿ ಇರುವ ಕ್ಷೇತ್ರದ ಕಡೆಗೆ ಚಲನೆ. ಕೆಲಸಕ್ಕೆ ಸಂಬಂಧಿಸಿದ ಹೊಸ ಮಾದರಿಗಳಿಂದಾಗಿ ಈ ಬದಲಾವಣೆಗಳು ಆಗುತ್ತಿವೆ ಎಂದರು.

ಕಳೆದ 10 ವರ್ಷಗಳಲ್ಲಿ, ಉತ್ಪನ್ನ ನಾವೀನ್ಯತೆ, ವ್ಯವಹಾರ ಮಾದರಿಗಳು, ಗ್ರಾಹಕರನ್ನು ಪಡೆಯುವುದು ಮತ್ತು ಡಿಜಿಟಲೀಕರಣ ಇವುಗಳಿಂದಾಗಿ ವ್ಯವಹಾರ ನಿರ್ವಹಣೆಗಳು ಬಹಳ ಬದಲಾವಣೆಗಳನ್ನು ಕಂಡಿವೆ. ಧನಾತ್ಮಕ ವರ್ತನೆ, ಮೃದು ಕೌಶಲ್ಯಗಳು, ಕಠಿಣ ಕೌಶಲ್ಯಗಳು, ಕಲಿಯಲು ಆಸಕ್ತಿ ಮತ್ತು ಮಾಹಿತಿ ಸಾಕ್ಷರತೆ–ಇವುಗಳು ಕಾರ್ಪೊರೇಟ್ ಪ್ರಪಂಚದಲ್ಲಿ ನಿರೀಕ್ಷಿಸಲ್ಪಡುವ ಮುಖ್ಯ ಗುಣಗಳು ಎಂದು ಸಲಹೆ ನೀಡಿದರು.




ಕ್ಷಿತಿಜ್ ಮಾಥುರ್ ಮತ್ತು ಡಿ.ಜ್ಯೋತ್ಸ್ನಾ, 2020–2022 ಬ್ಯಾಚ್‌ನ ಪಿಜಿಡಿಎಂ ವಿದ್ಯಾರ್ಥಿಗಳು–ಇವರೆಲ್ಲರೂ ಪ್ಯಾನೆಲ್‌ನ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಾಲೇಜಿನ ಪ್ರಾಧ್ಯಾಪಕ ಡಾ.ಎಸ್.ಎನ್.ಪ್ರಸಾದ್ ಫ್ಯಾನಲ್‌ನ ಸಂಚಾಲಕರಾಗಿದ್ದರು. ಎಸ್‌ಡಿಎಂಐಎಂಡಿ ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಸಹಾಯಕ ಪ್ರಾಧ್ಯಾಪಕ ಪ್ರೊ.ಎಸ್.ಕಣ್ಣದಾಸ್ ವಂದನಾರ್ಪಣೆ ಮಾಡಿದರು. ಅಧ್ಯಾಪಕ ವೃಂದ, ಸಿಬ್ಬಂದಿ, ಸಿಐಐನ ಸದಸ್ಯರು ಹಾಜರಿದ್ದರು.